ಶ್ರೀಮತಿ ಎನ್.ಜ್ಯೋತಿರೆಡ್ಡಿ (ಗೌರಿಬಿದನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಜ್ಯಡಿಷಿಯಲ್ ನ್ಯಾಯಾಲಯ ಕಟ್ಟಡದ ನಿರ್ಮಾಣ ಯಾವಾಗ ಪೂರ್ಣಗೊಂಡಿದೆ; ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು?

ಆ) ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ?

ಇ) ಆ ಬಗ್ಗೆ ಇದುವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಈ ಕಟ್ಟಡವು ಇನ್ನು ಪೂರ್ಣಗೊಂಡಿರುವುದಿಲ್ಲ. ಈ ಕಟ್ಟಡದ ಕಾಮಗಾರಿಯನ್ನು ಮಾರ್ಚ್ 1999ರ ಒಳಗೆ ಪೂರ್ಣಗೊಳಿಸಲಾಗುವುದು.

ಆ) ರೂ.40 ಲಕ್ಷಗಳು ಮಂಜೂರಾಗಿದೆ.

ಇ) ಸೆಪ್ಟೆಂಬರ್ 98ರ ವರೆಗೆ ರೂ.23.83 ಲಕ್ಷಗಳು ಬಿಡುಗಡೆಯಾಗಿದೆ.

ದಾವಣಗೆರೆಯಲ್ಲಿ ಕ್ರೀಡಾಂಗಣ ಮತ್ತು ಈಜು ಕೊಳದ ನಿರ್ಮಾಣ.

562: (4020)

ಶ್ರೀ ಎನ್.ಎಸ್.ಮಲ್ಲಿಕಾರ್ಜುನ, (ದಾವಣಗೆರೆ): ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆಯಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಹಾಗೂ ಈಜುಕೊಳ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಅವುಗಳಿಗೆ ಮಂಜೂರಾತಿ ಮಾಡಿ ನಿರ್ಮಿಸಲಾಗುವುದು? (ವಿವರ ನೀಡುವುದು)

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಸುರಪುರ ತಾಲ್ಲೂಕಿನ ಹನುಮಸಾಗರ ಗ್ರಾಮದಲ್ಲಿ ಪಶುವೈದ್ಯಕೀಯ ಘಟಕ ಸ್ಥಾಪನೆ.

563:(3963)

ಶ್ರೀ ರಾಜಾ ವೆಂಕಟಪ್ಪ ನಾಯ್ಕ (ಸುರಪುರ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸುರಪುರ ತಾಲ್ಲೂಕು ಹನುಮಸಾಗರ ಗ್ರಾಮದಲ್ಲಿ ಪಶುವೈದ್ಯ ಘಟಕವನ್ನು ಪ್ರಾರಂಭಿಸಲು ಯಾವುದಾದರು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ದಿನಾಂಕ 9.11.1998ರ ಚುಕ್ಕಿಗುರುತಿಲ್ಲದ ಪ್ರಶ್ನೋತ್ತರಗಳು.

ಮರ ಕಡಿಯಲು ಅನುಮತಿ.

2846:(3899)

ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸ್ವಂತ ಉಪಯೋಗಕ್ಕೆ ಮರ ಕಡಿಯಲು ಅನುಸರಿಸಬೇಕಾದ ನಿಯಮಗಳೇನು?

2. ಕಾಫಿ ಮತ್ತು ಏಲಕ್ಕಿ ತೋಟಗಳಲ್ಲಿ ಮರ ಕಡಿಯಲು ಅನುಮತಿ ಕೊಡಲಾಗಿದೆಯೇ ಹಾಗಿದ್ದಲ್ಲಿ ಯಾವಾಗ ಕೊಡಲಾಗಿದೆ.

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):